ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ     ದಿನಾಂಕ : DATE : 07/1/2020

# ಪ್ರವಾಹ: ರಾಜ್ಯಕ್ಕೆ ₹ 1,869 ಕೋಟಿ

ಪ್ರಜಾವಾಣಿ ವಾರ್ತೆ 7/1/2020

ನವದೆಹಲಿ: ಮುಂಗಾರು ಹಂಗಾಮಿನಲ್ಲಿ ಪ್ರವಾಹದಿಂದ ತತ್ತರಿಸಿದ್ದ ಕರ್ನಾಟಕಕ್ಕೆ ಕೇಂದ್ರ ಸರ್ಕಾರವು ರಾಷ್ಟ್ರೀಯ ನೈಸರ್ಗಿಕ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಯಿಂದ ₹1,869.85 ಕೋಟಿ ಪರಿಹಾರ ನೀಡಿದೆ.

ಸಂಕಷ್ಟಕ್ಕೆ ಒಳಗಾಗಿರುವ ದೇಶದ 13 ರಾಜ್ಯಗಳ ಪೈಕಿ ಕರ್ನಾಟಕ ಸೇರಿದಂತೆ 7 ರಾಜ್ಯಗಳಿಗೆ ₹5,908.56 ಕೋಟಿ ಹೆಚ್ಚುವರಿ ಪರಿಹಾರ ಒದಗಿಸುವ ನಿರ್ಧಾರವನ್ನು ಗೃಹ ಸಚಿವ ಅಮಿತ್ ಶಾ ನೇತೃತ್ವದ ಉನ್ನತ ಮಟ್ಟದ ಸೋಮವಾರ ಸಭೆ ನಿರ್ಧರಿಸಿತು.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ನೀತಿ ಆಯೋಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು. ಭಾರಿ ಪ್ರವಾಹ, ಮೇಘ ಸ್ಫೋಟ, ಭೂಕುಸಿತದಂತಹ ನೈಸರ್ಗಿಕ ವಿಕೋಪದಿಂದ ಸಂಕಷ್ಟಕ್ಕೆ ಈಡಾಗಿರುವ ರಾಜ್ಯಗಳಿಗೆ ಕೇಂದ್ರವು ಸಕಾಲಕ್ಕೆ ಎಲ್ಲ ರೀತಿಯ ನೆರವು ಒದಗಿಸುತ್ತಿದೆ ಎಂದು ತಿಳಿಸಿದೆ.

**₹ 38,000 ಕೋಟಿ ನಷ್ಟ:** ಕಳೆದ ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಸುರಿದಿದ್ದ ಭಾರಿ ಮಳೆ ಹಾಗೂ ಪ್ರವಾಹದಿಂದ ರಾಜ್ಯದಲ್ಲಿ ₹ 38,000 ಕೋಟಿಯಷ್ಟು ನಷ್ಟ ಉಂಟಾಗಿದೆ ಎಂದು ರಾಜ್ಯ ಸರ್ಕಾರ ಸಲ್ಲಿಸಿದ್ದ ವರದಿ ಆಧರಿಸಿ ಕೇಂದ್ರವು ಅಕ್ಟೋಬರ್ 4ರಂದು ಮುಂಗಡ ಪರಿಹಾರದ ರೂಪದಲ್ಲಿ 1,200 ಕೋಟಿ ಮಂಜೂರು ಮಾಡಿತ್ತು. ಇದೀಗ ಮಂಜೂರಾಗಿರುವ ಮೊತ್ತವೂ ಸೇರಿ ರಾಜ್ಯವು ಪ್ರವಾಹ ಪರಿಹಾರ ರೂಪದಲ್ಲಿ ಒಟ್ಟು ₹3,069.85 ಕೋಟಿ ಪಡೆದಂತೆ ಆಗಲಿದೆ.

## ಪ್ರಧಾನಿ ಎದುರೇ ಸಿ.ಎಂ ಹಕ್ಕೊತ್ತಾಯ

ಗುರುವಾರ ತುಮಕೂರಿನಲ್ಲಿ ನಡೆದ ರೈತರ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಸಮ್ಮುಖದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಪ್ರವಾಹದಿಂದ ನಲುಗಿರುವ ರಾಜ್ಯದ ಜನರು ಬದುಕು ಕಟ್ಟಿಕೊಳ್ಳಲು ನೆರವಾಗುವಂತೆ ಮನವಿ ಮಾಡಿದ್ದರು.

‘ಪ್ರವಾಹದಿಂದಾಗಿ ರಾಜ್ಯದಲ್ಲಿ 3 ಲಕ್ಷ ಮನೆಗಳು ನೆಲಸಮಗೊಂಡಿದ್ದು, ಬೆಳೆ ಹಾನಿ, ಸೇತುವೆ, ರಸ್ತೆಗಳಿಗೂ ಉಂಟಾದ ಹಾನಿಯ ಒಟ್ಟು ಮೊತ್ತ ₹30,000 ಕೋಟಿಯಷ್ಟಾಗಿದೆ. ಹೆಚ್ಚಿನ ಪರಿಹಾರ ನೀಡುವಂತೆ ಪ್ರಧಾನಿಯವರಿಗೆ ಮೂರ್ನಾಲ್ಕು ಬಾರಿ ಮನವಿ ಸಲ್ಲಿಸಿದರೂ ಕೇಂದ್ರದ ಅನುದಾನ ಬಿಡುಗಡೆಯಾಗಿಲ್ಲ ಎಂದು ಅವರು ಮೋದಿ ಎದುರೇ ಹೇಳಿದ್ದರು.